# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಭಾನುವಾರ, ಫೆಬ್ರವರಿ 16, 2025

ಸಂಪುಟ : 51 ಸಂಚಿಕೆ : 275 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ
ಹನ್ನೆರಡು ವರ್ಷಗಳಾದವು.
ಪ್ರತಿ ಕ್ಷಣವೂ ನಿಮ್ಮ ನೆನಪಿನಲ್ಲಿದ್ದು,
ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ

ಸಹೋದರರು : ಎಂ.ಜಿ. ರಾಜಣ್ಣ,
ಎಂ.ಜಿ. ಬಸವರಾಜ್, ಎಂ.ಜಿ. ಬಾಬಣ್ಣ
ಧರ್ಮಪತ್ನಿ : ಶ್ರೀಮತಿ ಎಂ.ಜಿ. ಅನಿತಾ ಮತ್ತು ಮಕ್ಕಳು
ಹಾಗೂ ಕುಟುಂಬ ವರ್ಗದವರು, ಬಂಧು-ಮಿತ್ರರು.

**ಲಿಂ॥ ಎಂ.ಜಿ. ಬಕ್ಕೇಶ್**
ಮಾಜಿ ಮೇಯರ್, ಮಹಾನಗರ ಪಾಲಿಕೆ, ದಾವಣಗೆರೆ.

**ಉಮಾ ಟ್ರೇಡರ್ಸ್,**
ದಾವಣಗೆರೆ, ಚಿತ್ರದುರ್ಗ.
**ಉಮಾ ಟ್ರೇಡಿಂಗ್ ಕಂಪನಿ,**
**ಉಮಾ ಮಹೇಶ್ವರ ಇಂಡಸ್ಟ್ರೀಸ್**
ಹರಿಹರ ರಸ್ತೆ, ದಾವಣಗೆರೆ.

## 11ನೇ ವರ್ಷದ ಸವಿನೆನಪು



**ದಿ॥ ಶ್ರೀ ಯರಗಲ್ ಈಶಣ್ಣ**

ಮಾಲೀಕರು : ಪ್ರಿಯದರ್ಶಿನಿ ಅಕ್ಕಿ ಮತ್ತು
ಅವಲಕ್ಕಿ ಗಿರಣಿ
ಸಂಸ್ಥಾಪಕರು : ಕನಕ ಪಟ್ಟಣ ಸಹಕಾರಿ ಬ್ಯಾಂಕ್
ಸಂಸ್ಥಾಪಕರು : ಕವಿರತ್ನ ಕಾಳಿದಾಸ ಕ್ರೆಡಿಟ್
ಕೋ-ಆಪ್. ಸೊಸೈಟಿ

ನೀವು ನಮ್ಮನ್ನಗಲಿ ದಿನಾಂಕ 16.02.2025 ಕ್ಕೆ
ಹನ್ನೊಂದು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಪತ್ನಿ : ಶ್ರೀಮತಿ ಜೀವಿಕಾ ಈಶಣ್ಣ ಯರಗಲ್
ಮಗ : ಶ್ರೀಮತಿ ವಾಣಿ ಮತ್ತು ಲೋಹಿತ್ ಯರಗಲ್ ಹಾಗೂ ಮಕ್ಕಳು
ಮಗಳು : ಶ್ರೀಮತಿ ಪ್ರಿಯದರ್ಶಿನಿ ಮತ್ತು ದೀಪಕ್ ಹಾಗೂ ಮಕ್ಕಳು.
ಸಹೋದರ : ಶ್ರೀಮತಿ ಲಲಿತಾ ಮತ್ತು ಬಿ. ವಿಜಯಕುಮಾರ್ ಹಾಗೂ ಮಕ್ಕಳು.

## ಗೌಡಪ್ಪ ಪ್ರವೀಣ್ ಅವರಿಗೆ ಹೃದಯಪೂರ್ವಕ ಅಭಿನಂದನೆಗಳು



ಮಲ್ಲಿಕಾರ್ಜುನ ಇಂಡಸ್ಟ್ರೀಸ್ ಪಾಲುದಾರರಾದ **ಜಿ.ಕೆ. ಪ್ರವೀಣ್ ಶಾಮನೂರು** ಅವರಿಗೆ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ವಿಭಾಗದಲ್ಲಿ ಜಿಲ್ಲಾ ಮಟ್ಟದ ಶ್ರೇಷ್ಠ ಉದ್ಯಮಿ ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರ ಬೆಂಗಳೂರಿನಲ್ಲಿ ಆಯೋಜಿಸಿದ್ದ ಜಾಗತಿಕ ಹೂಡಿಕೆದಾರರ ಸಭೆಯಲ್ಲಿ ರಾಜ್ಯಪಾಲರು ಮತ್ತು ಸರ್ಕಾರದ ಉಪಮುಖ್ಯಮಂತ್ರಿಗಳಿಂದ ಪ್ರಶಸ್ತಿಯನ್ನು ಪಡೆದಿದ್ದಾರೆ. ಶಾಮನೂರಿನ ಹಿರಿಯ ಮುಖಂಡರೂ, ಮಾರ್ಗದರ್ಶಕರೂ, ನಮ್ಮ ನೆಚ್ಚಿನ ನಾಯಕರೂ ಆಗಿರುವ **ಗೌಡಪ್ಪ ಶ್ರೀ ಕಲ್ಲೇಶಣ್ಣನವರ** ಸುಪುತ್ರರಾಗಿರುವ, ಉದ್ಯಮ ಕ್ಷೇತ್ರದಲ್ಲಿ ನಮ್ಮೂರನ್ನು ರಾಜ್ಯ ಮಟ್ಟದಲ್ಲಿ ಗುರುತಿಸುವಂತೆ ಮಾಡಿದ, ಉದ್ಯಮ ಕ್ಷೇತ್ರದಲ್ಲಿ ಶಾಮನೂರಿಗೆ ಹೊಸದೊಂದು ಮೆರುಗು ತಂದ ಉದಯೋನ್ಮುಖ ಯುವ ಉದ್ಯಮಿಗಳಾದ **ಶ್ರೀ ಜಿ. ಕೆ. ಪ್ರವೀಣ್ ಶಾಮನೂರು** ಅವರಿಗೆ

**ಶಾಮನೂರಿನ ಸಮಸ್ತ ಗ್ರಾಮಸ್ಥರ ಪರವಾಗಿ ಹೃದಯಪೂರ್ವಕ ಅಭಿನಂದನೆಗಳು.**



**ಅನಂತ್ ಬಿ.ಎನ್.**
ಕಾಂಗ್ರೆಸ್ ಮುಖಂಡರು,
ಶಾಮನೂರು



**ಎ.ವಿ. ನಾಗರಾಜ್ (ಪಾಪಣ್ಣ)**
ಕಾಂಗ್ರೆಸ್ ಮುಖಂಡರು, ಶಾಮನೂರು



**ಶ್ರೀಕಾಂತ್ ಹಳ್ಳೇರ**
ಕಾಂಗ್ರೆಸ್ ಮುಖಂಡರು,
ಶಾಮನೂರು



**ಡಿ.ಬಿ. ಪ್ರವೀಣ್ ಶಾಮನೂರು**
ಕಾಂಗ್ರೆಸ್ ಮುಖಂಡರು, ಶಾಮನೂರು


SINCE 1955
KUMARAN SILK TRADERS
Saree for Every Occasion, Style & Culture.
Ph: 8867792923

VARAM
BOUTIQUE JEWELS
92.5 SILVER JEWELLERY

ಚೆನ್ನೈ ಕುಮರನ್
EXHIBITION & SALE
ದಾವಣಗೆರೆ



— ವೇದಿಕೆ —
ಸ್ಥಳ : ಸದರ್ನ್ ಸ್ಟಾರ್ (ಪಾರ್ವತಿ ಪೆರ್ಲ್ಸ್)
ಶಾಮನೂರು ರಸ್ತೆ, ಕುವೆಂಪು ನಗರ
ದಾವಣಗೆರೆ 577004

— ದಿನಾಂಕ —
ಫೆಬ್ರವರಿ
14th FRI 15th SAT 16th SUN 2025
at 10 AM to 9 PM

ಇಂದೇ ಕೊನೆಯ ದಿನ! ತಡ ಮಾಡದೆ
ತಕ್ಷಣ ಭೇಟಿ ನೀಡಿ

SAREES 5% DISCOUNT
92.5 SILVER JEWELLERY 10% DISCOUNT

*Conditions apply

ಹೊಸ ನಂ. 15, ಹಳೆಯ ನಂ. 653, 11ನೇ ಸಿ ಮುಖ್ಯರಸ್ತೆ, 5ನೇ ಬ್ಲಾಕ್, ಜಯ ನಗರ,
ಬೆಂಗಳೂರು - 560 041. ಫೋನ್ : +91 88677 92923



TATA ಉತ್ಪಾದನೆ



ಸೊಗಸಾದ ವಜ್ರದ ಆಭರಣದ
ಅತಿದೊಡ್ಡ ಪ್ರದರ್ಶನಕ್ಕೆ ಸಾಕ್ಷಿಯಾಗಿದೆ

TANISHQ
A TATA PRODUCT

ಚಿನ್ನಾಭರಣಗಳ ತಯಾರಿಕಾ
ವೆಚ್ಚದ ಮೇಲೆ ಮತ್ತು
ವಜ್ರಾಭರಣಗಳ ಮೌಲ್ಯದ ಮೇಲೆ
**20%** ವರೆಗೆ ಕಡಿತ*

ಯಾವುದೇ ಜ್ಯುವೆಲ್ಲರ್‌ನಿಂದ
ಖರೀದಿಸಿದ ಹಳೆಯ ಚಿನ್ನದ ಮೇಲೆ
**100%*** ವಿನಿಮಯ
ಮೌಲ್ಯ ಪಡೆಯಿರಿ.


## 7ನೇ ವಾರ್ಷಿಕೋತ್ಸವ ಸಮಾರಂಭ

ಉದ್ಘಾಟನೆ:

**ಸನ್ಮಾನ್ಯ ಡಾ॥ ಪ್ರಭಾ ಮಲ್ಲಿಕಾರ್ಜುನ್**
ಮಾನ್ಯ ಲೋಕಸಭಾ ಸದಸ್ಯರು, ದಾವಣಗೆರೆ.

ಆಗಮನಾಭಿಲಾಷಿಗಳು
**ಕೆ.ಜಾವೀದ್ ಸಾಬ್ & ಫ್ಯಾಮಿಲಿ ।**
**ಕೆ.ಜೆ.ಜ್ಯುವೆಲ್ಸ್ । ಕೆ.ಜೆ.ಹುಂಡ್ಸೈ**

Date: 16-02-2025
Time: 11.30 Onwards

Venue:
Kalash Banqet Hall, 2nd Floor, Toshani Emporium,
A.V.K. College Road, P.J.Extension, Davanagere.
M: 95133 22462, 63647 95111

# ಹಳೇ ಕುಂದುವಾಡದಲ್ಲಿ ನಾಳೆ ದೇವಸ್ಥಾನ ಉದ್ಘಾಟನೆ



ದಾವಣಗೆರೆ, ಫೆ.15- ತಾಲ್ಲೂಕಿನ ಹಳೇಕುಂದುವಾಡ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಮತ್ತು ಶ್ರೀ ಬಸವೇಶ್ವರ ದೇವ ಸ್ಥಾನದ ಉದ್ಘಾಟನೆ, ಶಿಲಾಮೂರ್ತಿ ಪ್ರತಿಷ್ಠಾಪನೆ ಮತ್ತು ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಕಾರ್ಯಕ್ರಮ ಫೆಬ್ರವರಿ 13ರಿಂದ 17ರವರೆಗೆ 5 ದಿನಗಳ ಕಾಲ ನಡೆಯಲಿದ್ದು, ನಾಳೆ ದಿನಾಂಕ 16ರಂದು ಕುಂಭದೊಂದಿಗೆ ಅದ್ದೂರಿ ಮೆರವಣಿಗೆ, 17ರಂದು ಧಾರ್ಮಿಕ ಸಭೆ ನಡೆಯಲಿದೆ ಎಂದು ಶ್ರೀ ಆಂಜನೇಯ ಸ್ವಾಮಿ, ಶ್ರೀ ಬಸವೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಹೆಚ್.ಜಿ.ಗಣೇಶಪ್ಪ ಅವರು ತಿಳಿಸಿದ್ದಾರೆ.

ನಾಡಿದ್ದು ದಿನಾಂಕ 17ರ ಸೋಮವಾರ ಬೆಳಿಗ್ಗೆ 11ಕ್ಕೆ ಧಾರ್ಮಿಕ ಸಭೆ ನಡೆಯಲಿದೆ. ಸಾನ್ನಿಧ್ಯವನ್ನು ಸಿರಿಗೆರೆ ಬೃಹನ್ಮಠದ ಡಾ.ಶಿವಮೂರ್ತಿ ಶಿವಾಚಾರ್ಯ ಶ್ರೀಗಳು, ಕಾಗಿನೆಲೆ ಮಹಾಸಂಸ್ಥಾನ ಶ್ರೀ ಕನಕ ಗುರುಪೀಠದ ನಿರಂಜನಾನಂದಪುರಿ ಶ್ರೀಗಳು, ಹೊಸದುರ್ಗದ ಶ್ರೀ ಕನಕ ಗುರುಪೀಠ ಶಾಖಾ ಮಠದ ಈಶ್ವರಾನಂದಪುರಿ, ದಾವಣಗೆರೆಯ ಶ್ರೀ ಮುರುಘ ರಾಜೇಂದ್ರ ಮಠದ ಬಸವಪ್ರಭು ಶ್ರೀಗಳು, ಹದಡಿಯ ಚಂದ್ರಗಿರಿ ಮಠದ ಪರಮಹಂಸ ಶ್ರೀ ಮುರಳೀಧರ ಶ್ರೀಗಳು, ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ವಚನಾನಂದ ಶ್ರೀಗಳು, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠ ಮಹಾಸಂಸ್ಥಾನದ ಪ್ರಸನ್ನಾನಂದಪುರಿ ಶ್ರೀಗಳು, ಶ್ರೀ ಕ್ಷೇತ್ರ ಅವರಗೊಳ್ಳದ ಪುರವರ್ಗ ಹಿರೇಮಠದ ಓಂಕಾರ ಶಿವಾಚಾರ್ಯ ಶ್ರೀಗಳು, ಚಿತ್ರದುರ್ಗದ ಮಾದಾರ ಚನ್ನಯ್ಯ ಗುರುಪೀಠದ ಮಾದಾರ ಚನ್ನಯ್ಯ ಶ್ರೀಗಳು, ಚಿತ್ರದುರ್ಗದ ಮಾಚಿದೇವ ಮಹಾಸಂಸ್ಥಾನ ಮಠದ ಬಸವ ಮಾಚಿದೇವ ಶ್ರೀಗಳು, ಹೊಸದುರ್ಗ ಭಗೀರಥ ಪೀಠದ ಚಿನ್ಮೂಲಾದ್ರಿ ಶಿಲಾಪುರಿ ಮಹಾಸಂಸ್ಥಾನದ ಪುರುಷೋತ್ತಮಾನಂದಪುರಿ ಶ್ರೀಗಳು, ಚಿತ್ರದುರ್ಗದ ಛಲವಾದಿ ಗುರುಪೀಠದ ಬಸವ ನಾಗಿದೇವ ಶ್ರೀಗಳು, ಹಳೇಕುಂದುವಾಡದ ಕರಿಬಸವೇಶ್ವರ ದೇವಸ್ಥಾನದ ಧರ್ಮಾಧಿಕಾರಿ ರಾಜಣ್ಣ ವಹಿಸಲಿದ್ದಾರೆ.

ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಸಂಸದೆ ಡಾ.ಪ್ರಭಾ ಎಸ್.ಎಸ್. ಮಲ್ಲಿಕಾರ್ಜುನ್, ಮಾಜಿ ಕೇಂದ್ರ ಸಚಿವ ಜಿ.ಎಂ. ಸಿದ್ದೇಶ್ವರ, ಮಾಜಿ ಸಚಿವ ಎಸ್.ಎ.ರವೀಂದ್ರ ನಾಥ ಸೇರಿದಂತೆ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

# ಜಗಳೂರು : ಜೆ.ಎಂ.ಇಮಾಂ ಸಾಹೇಬರ ಆದರ್ಶ ಇಂದಿನ ಯುವಪೀಳಿಗೆಗೆ ಮಾದರಿ



ಜಗಳೂರು, ಫೆ.15- ಹಿರಿಯ ಮುತ್ಸದ್ಧಿ ರಾಜಕಾರಣಿ ದಿವಂಗತ ಜೆ.ಎಂ.ಇಮಾಂ ಸಾಹೇಬರ ಆದರ್ಶ ಮತ್ತು ಸಾಧನೆಗಳು ಇಂದಿನ ಯುವ ಪೀಳಿಗೆಗೆ ಮಾದರಿಯಾಗಿವೆ ಎಂದು ಕೆಪಿಸಿಸಿ ಎಸ್ಸಿ ಘಟಕದ ಮಾಜಿ ರಾಜ್ಯಾಧ್ಯಕ್ಷ ಕೆ. ಪಿ.ಪಾಲಯ್ಯ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲ್ಲೂಕು ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ ಮುತ್ಸದ್ಧಿ ರಾಜಕಾರಣಿ ದಿವಂಗತ ಜೆ. ಎಂ.ಇಮಾಂ ಸಾಹೇಬ್ ಅವರ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು. ತಾಲ್ಲೂಕಿನ ಸಣ್ಣ ಹಳ್ಳಿಯಾದ ಮರೇನಹಳ್ಳಿ ಗ್ರಾಮದಲ್ಲಿ ಜನಿಸಿದ ಅವರು, ತಮ್ಮ ಸಾಧನೆ ಮೂಲಕ ರಾಷ್ಟ್ರಮಟ್ಟಕ್ಕೆ ಬೆಳೆದು ಶತಮಾನಗಳ ಕಾಲ ಅಳಿಸದಂತಹ ಸಾಧನೆ ಮಾಡಿದ್ದಾರೆ ಎಂದು ಹೇಳಿದರು.

ತಾಲ್ಲೂಕಿನಲ್ಲಿ ಮೊದಲ ಪದವೀಧರರಾಗಿ ಪ್ರಥಮ ನಗರಸಭಾ ಅಧ್ಯಕ್ಷರು, ನಂತರ ಮೈಸೂರು ರಾಜ್ಯದ ಮೊದಲ ವಿರೋಧ ಪಕ್ಷದ ನಾಯಕರಾಗಿ ಮೊದಲ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರ ಸರ್ಕಾರದ ಕಾರ್ಯವೈಖರಿಯನ್ನು ಕಟುವಾಗಿ ಟೀಕಿಸುವ ಮೂಲಕ ಮಾದರಿ ರಾಜಕಾರಣಿ ಎನಿಸಿದ್ದರು. ಅಂದಿನ ಅವಿಭಜಿತ ಚಿತ್ರದುರ್ಗ ಜಿಲ್ಲೆ ಸೇರಿದಂತೆ ನಾಡಿನಾದ್ಯಂತ ಹತ್ತು ಹಲವು ಜನಪರ ಕೆಲಸ ಮಾಡಿ, ನಮ್ಮ ತಾಲ್ಲೂಕಿನ ಆದರ್ಶ ವ್ಯಕ್ತಿ ಎನಿಸಿದ್ದಾರೆ. ಅವರ ಹೆಸರು ಮುಂದಿನ ಪೀಳಿಗೆಗೆ ಉಳಿಯಲು ತಾಲ್ಲೂಕಿನ ಯಾವುದಾದರು ಒಂದು ಕೆರೆಗೆ ಹಾಗೂ ಮುಖ್ಯ ರಸ್ತೆ ವೃತ್ತಕ್ಕೆ ಅಥವಾ ತಾಲ್ಲೂಕು ಪಂಚಾಯಿತಿ ಕಚೇರಿ ಸಭಾಂಗಣಕ್ಕೆ ಅವರ ಹೆಸರು ನಾಮಕರಣ ಮಾಡಿ ಗೌರವ ಸೂಚಿಸಬೇಕು ಎಂದು ಒತ್ತಾಯಿಸಿದರು.

ವಕೀಲ ಡಿ.ಶ್ರೀನಿವಾಸ್ ಮಾತನಾಡಿ, ಜಗಳೂರು ತಾಲ್ಲೂಕಿನ ಹಲವು ಕೆರೆಗಳನ್ನು ಕಟ್ಟಿಸಿದ ಹಾಗೆಯೇ ವಿಧಾನ ಸೌಧಕ್ಕೆ ಸರ್ಕಾರಿ ಕೆಲಸ ದೇವರ ಕೆಲಸ ಎಂದು ಬರೆಸಿದ ಮತ್ತು ಮೈಸೂರು ಮಹರಾಜರ ಪ್ರಜಾ ಪ್ರತಿನಿಧಿ ಸರ್ಕಾರದಲ್ಲಿ ಹದಿನಾರು ಖಾತೆಗಳನ್ನು ನಿಭಾಯಿಸಿದ ಕೀರ್ತಿ ಇಮಾಂ ಸಾಹೇಬರಿಗೆ ಇದೆ ಎಂದು ತಿಳಿಸಿದರು.

ಅವರು ಅಧಿಕಾರಕ್ಕೆ ಆಸೆ ಪಟ್ಟಿದ್ದರೆ ರಾಜ್ಯಪಾಲರು, ರಾಷ್ಟ್ರಪತಿಗಳು ಆಗಬಹುದಿತ್ತು. ಎಲ್ಲವನ್ನು ನಯವಾಗಿ ನಿರಾಕರಿಸಿ, ಸೀದಾ ಹುಟ್ಟೂರಿಗೆ ಬಂದು ಸಮಾಜ ಸೇವೆ ಮಾಡುತ್ತಾ ದಿನ ಕಳೆದ ಅತ್ಯಂತ ಆದರ್ಶ ವ್ಯಕ್ತಿ ಇಮ್ಮಣ್ಣ ಎಂದು ಹೇಳಲು ಹೆಮ್ಮೆ ಎನಿಸುತ್ತದೆ ಎಂದರು.

ಮಾನವ ಬಂಧುತ್ವ ವೇದಿಕೆ ಸಂಚಾಲಕ ಮರೇನಹಳ್ಳಿ ಬಸವರಾಜ್, ದಲಿತ ಸಂಘರ್ಷ ಸಮಿತಿ ಸಂಚಾಲಕ ಬಿ.ಸತೀಶ್, ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ತಿಪ್ಪೇಸ್ವಾಮಿ ಗೌಡ್ರು, ಇಮಾಂ ಸಾಹೇಬ್ ಅವರ ಸಾಧನೆ ಮತ್ತು ಯೋಜನೆಗಳ ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಯುವ ಕರ್ನಾಟಕ ವೇದಿಕೆಯ ಹೆಚ್.ಬರ್ಕತ್ ಅಲಿ, ತಾ.ಪಂ. ಮಾಜಿ ಸದಸ್ಯ ಜಗಳೂರಯ್ಯ, ಗ್ರಾ.ಪಂ. ಸದಸ್ಯ ಹೊನ್ನಮರಡಿ ಜಯ್ಯಣ್ಣ, ಮಾಜಿ ಸದಸ್ಯ ನಾಗರಾಜ್, ಮುಖಂಡರಾದ ಬಿಸ್ತುವಳ್ಳಿ ಬಾಬು, ಧನ್ಯಕುಮಾರ್, ಮಲ್ಲಿಕಾರ್ಜುನ್, ಅಣಬೂರು ಮಠದ ಕೊಟ್ರೇಶ್, ಗುತ್ತಿದುರ್ಗ ರುದ್ರೇಶ್, ವಕೀಲರಾದ ಸಣ್ಣ ಓಬಯ್ಯ, ಭೂಪತಿ, ತಿಪ್ಪೇಸ್ವಾಮಿ ಸೇರಿದಂತೆ ಹಲವರು ಇದ್ದರು.

# ನಾಳೆ ಆವರಗೊಳ್ಳ ವೀರಭದ್ರ ಸ್ವಾಮಿ ರಥ

ದಾವಣಗೆರೆ ಸಮೀಪದ ಆವರಗೊಳ್ಳ ಗ್ರಾಮದ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವವು ನಾಡಿದ್ದು ದಿನಾಂಕ 17ರ ಸೋಮವಾರ ಜರುಗಲಿದೆ ಎಂದು ವೀರಭದ್ರೇಶ್ವರ ಸ್ವಾಮಿ ಸೇವಾ ಸಮಿತಿಯ ಅಧ್ಯಕ್ಷ ಬಿ.ಎಂ. ಷಣ್ಮುಖಯ್ಯ ತಿಳಿಸಿದರು.

ಇಂದು ರಾತ್ರಿ ದೊಡ್ಡಬಾತಿ ರೇವಣಸಿದ್ದೇಶ್ವರ ಸ್ವಾಮಿ ಮತ್ತು ಬೀರಲಿಂಗೇಶ್ವರ ಸ್ವಾಮಿಯ ಆಗಮನ, ವೀರಭದ್ರ ಸ್ವಾಮಿಗೆ ಆವರಗೊಳ್ಳ ಪುರವರ್ಗ ಹಿರೇಮಠಸ್ಥರಿಂದ ಹರಿದ್ರಾಲೇಪನ ಹಾಗೂ ತೇರುಮನೆ ಚೌಡೇಶ್ವರಿಗೆ ದೇವಸ್ಥಾನ ವತಿಯಿಂದ ಉಡಿ ತುಂಬಲಾಗುವುದು.

ನಾಳೆ ಸೋಮವಾರ ಸಂಜೆ 6 ಗಂಟೆಗೆ ಸ್ವಾಮಿಯ ಮಹಾ ರಥೋತ್ಸವ ನಡೆದ ಬಳಿಕ ರಾತ್ರಿ ಉಯ್ಯಾಲೆ ಮಂಟಪದಲ್ಲಿ ಸ್ವಾಮಿ ಆಸೀನರಾಗಲಿದ್ದು ನಂತರ ವೀರಗಾಸೆ ಸೇವೆ ನಡೆಯಲಿದೆ. 18ರಂದು ಮಂಗಳವಾರ ಬೆಳಗ್ಗೆ 8ಕ್ಕೆ ಸ್ವಾಮಿಯ ಗುಗ್ಗಳ ಸೇವೆ, ರಾತ್ರಿ 10 ಗಂಟೆಗೆ ಭಕ್ತರಿಂದ ಓಕಳಿ ಸೇವೆ ಮತ್ತು ಗಂಗಾ ಪೂಜೆ ನಡೆಯಲಿದೆ.

19ರಂದು ಬೆಳಗ್ಗೆ 8 ಗಂಟೆಗೆ ಸಕಲ ಬಿರುದಾವಳಿಗಳೊಂದಿಗೆ ಉಯ್ಯಾಲೆ ಮಂಟಪದಿಂದ ಸ್ವಾಮಿಯ ಗುಗ್ಗಳದೊಂದಿಗೆ ರೇವಣಸಿದ್ದೇಶ್ವರ ಹಾಗೂ ಬೀರಲಿಂಗೇಶ್ವರ ಸ್ವಾಮಿಗಳೊಂದಿಗೆ ದೇವಸ್ಥಾನಕ್ಕೆ ಬಂದು ಸೇರುವುದು. ಕೊನೆಯ ದಿನವಾದ 20ನೇ ತಾರೀಖಿನಂದು ಗುರುವಾರ ಕಂಕಣ ವಿಸರ್ಜನೆ ನಡೆಯಲಿದೆ.

## ಸಾರ್ವಜನಿಕ ಪ್ರಕಟಣೆ

**ಶ್ರೀಮತಿ ದೇವಮಣಿಗೌಡ ಬಿನ್ ಲೇ. ಮಹೇಶ್ವರಪ್ಪ ಎಂ. ಜಾಜೂರು** ಇವರ ಮಗಳಾದ ನಾನು ಸಾರ್ವಜನಿಕರಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಕೆಳಗಿನ ಷೆಡ್ಯೂಲ್ ಸ್ವತ್ತಿಗೆ ಸಂಪೂರ್ಣ ಮಾಲೀಕರಾರಾಗಿರುತ್ತೇನೆ. ಷಡ್ಯೂಲ್ ಸ್ವತ್ತು ನನ್ನ ಹೆಸರಿಗೆ ನೊಂದಾಸಿಯಿಕೊಂಡಿದ್ದು 1101. ಅಸಲಿ ಕ್ರಯ ಪತ್ರವನ್ನು ನಾನು ದಿನಾಂಕ 6.2.2025ರಂದು ಬೆಂಗಳೂರಿನಿಂದ ದಾವಣಗೆರೆಗೆ ಬಂದಾಗ ಮನೆಯನ್ನು ಬದಲಾಯಿಸುವಾಗ ಈ ಮೇಲ್ಕಂಡ ಕ್ರಯಪತ್ರವನ್ನು ಜೆರಾಕ್ಸ್ ಮಾಡಿಸಲು ಹೋಗುವಾಗ ಕ್ರಯಪತ್ರವು ಎಲ್ಲೋ ಬಿದ್ದು ಕಳೆದುಹೋಗಿರುತ್ತದೆ. ಸದರಿ ಕ್ರಯಪತ್ರವನ್ನು ಸಾಕಷ್ಟು ಬಾರಿ ಹುಡುಕಿದರೂ ಸಿಗದೆ ಇರುವ ಕಾರಣ ಈ ಬಗ್ಗೆ ನಾನು ದಿನಾಂಕ 13.02.2025ರಂದು ಆನ್‌ಲೈನ್‌ನಲ್ಲಿ ಲಾಸ್ಟ್ ಆರ್ಟಿಕಲ್ ರಿಪೋರ್ಟ್ ನಂ. 147401/2025 ರಂದು ದೂರು ದಾಖಲಿಸಿದ್ದೇನೆ. ಸದರಿ ಮೇಲ್ಕಂಡ ಅಸಲಿ ಕ್ರಯಪತ್ರವು ಯಾರಿಗಾದರೂ ಸಿಕ್ಕಲ್ಲಿ ಈ ಕೆಳಕಂಡ ಅಡ್ರೆಸ್ಸಿಗೆ ತಲುಪಿಸಬೇಕಾಗಿ ಈ ಮೂಲಕ ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಷೆಡ್ಯೂಲ್ :** ದಾವಣಗೆರೆ ಎಸ್.ಎಸ್. ಬಡಾವಣೆಯ ಎ ಬ್ಲಾಕ್, 4233/1 ಅಳತೆ 15X43 ವುಳ್ಳ ವಾಸೋಪಯೋಗಿ ನಿವೇಶನ **ಚಕ್ಕುಬಂಧಿ** : ಪೂರ್ವ : ರಸ್ತೆ, ಪಶ್ಚಿಮ : ರಸ್ತೆ, ಉತ್ತರ ರಸ್ತೆ, ದಕ್ಷಿಣ : ಬೆರೆಯುವ ರಸ್ತೆ.

**ಅಡ್ರೆಸ್ : ದೇವಮಣಿಗೌಡ ಬಿನ್ ಲೇ. ಮಹೇಶ್ವರಪ್ಪ ಜಾಜೂರು, ನಂ. 4233/1, ಎಸ್.ಎಸ್. ಬಡಾವಣೆ, ಎ ಬ್ಲಾಕ್, 2ನೇ ಮೇನ್, ಎಸ್.ಎಸ್. ಮಾಲ್ ಹಿಂಭಾಗ, ದಾವಣಗೆರೆ.**

# ಜಗಳೂರು ತಾಲ್ಲೂಕಿನಲ್ಲಿ ದೇವರ ಹುಂಡಿ ಕಳವು



ಜಗಳೂರು, ಫೆ.15- ತಾಲ್ಲೂಕಿನ ಹಿರೇಮಲ್ಲನ ಹೊಳೆ ಗ್ರಾಮದಲ್ಲಿ ರಸ್ತೆ ಸಮೀಪ ಇರುವ ಮಾದಲಿಂಗೇಶ್ವರ ದೇವಸ್ಥಾನದಲ್ಲಿ ಶುಕ್ರವಾರ ರಾತ್ರಿ ದೇವಸ್ಥಾನ ಮೈದಾನ ಏರಿದ ಕಳ್ಳರು ಬೀಗ ಒಡೆದು ಎರಡು ಹುಂಡಿ ಹೊತ್ತುಕೊಂಡು ಹೋಗಿ ಸಮೀಪದ ಹೊಲವೊಂದಲ್ಲಿ ಹುಂಡಿ ಹೊಡೆದು ಹಣ ದೋಚಿ ಕಬ್ಬಿಣದ ಹುಂಡಿ ಅಲ್ಲೇ ಬಿಟ್ಟು ಹೋಗಿದ್ದಾರೆ. ಶನಿವಾರ ಬೆಳಿಗ್ಗೆ ದೇವಸ್ಥಾನ ಪೂಜಾರಿ ದೇವಸ್ಥಾನದ ಪೂಜೆಗೆ ಬರುವಾಗ ಬಾಗಿಲು ಒಡೆದಿರುವುದು ಬೆಳಕಿಗೆ ಬಂದಿದೆ. ಜಗಳೂರು ಪೊಲೀಸ್ ಠಾಣೆ ಸಹಾಯಕ ಸಬ್ ಇನ್‌ಸ್ಪೆಕ್ಟರ್ ನಟರಾಜ್, ದಫೇದಾರ್ ಶಿವಪ್ರಕಾಶ್ ಸ್ಥಳಕ್ಕೆ ಆಗಮಿಸಿ, ಸ್ಥಳ ಪರಿಶೀಲಿಸಿ ದೂರು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ ಮುಂದಿನ ವಾರ ಮಾದಲಿಂಗೇಶ್ವರ ಗುಗ್ಗರಿ ಹಬ್ಬ ಇದ್ದರಿಂದ ದೇವಸ್ಥಾನಕ್ಕೆ ಬಣ್ಣ ಬಡಿದು ಶೃಂಗಾರ ಗೊಳಿಸಿ, ಮೈದಾನ ಸ್ವಚ್ಚಗೊಳಿಸಿದ್ದರು. ಜಾತ್ರೆ ಮಾಡಬೇಕು ಎನ್ನುವಷ್ಟರಲ್ಲಿ ಈ ಘಟನೆ ನಡೆದಿದೆ. ಈ ಹಿಂದೆ ಸಹ ಎರಡು ಬಾರಿ ಹುಂಡಿ ಹಣ ಕಳವು ಮಾಡಿದ್ದರು. ಇದುವರೆಗೂ ಪತ್ತೆಯಾಗಿಲ್ಲ ಎಂದು ದೇವಸ್ಥಾನ ಪೂಜಾರಿ ಪುತ್ರ ಪ್ರಹ್ಲಾದ್ ಅಸಮಾಧಾನ ವ್ಯಕ್ತ ಪಡಿಸಿದರು.

# ಸ್ತ್ರೀ ಕೀಳರಿಮೆಗೆ ಬ್ರೇಕ್ ಬೇಕಿದೆ

**(3ನೇ ಪುಟದಿಂದ)** ಪುರುಷರ ಅಧಿಪತ್ಯದ ವಿರುದ್ಧ ಹೋರಾಟ ಮಾಡಬೇಕಿದೆ. ಸ್ತ್ರೀ-ಪುರುಷರು ಸಮನಾಗಿ ಹಾಗೂ ಗೌರವದಿಂದ ಬದುಕುವ ಸಮ ಸಮಾಜ ಕಟ್ಟಬೇಕಿದೆ ಎಂದರು.

ಹೆಣ್ಣೆಂದರೆ ಅಡುಗೆ ಮಾಡುವುದು, ಮಕ್ಕಳ ಹೆರುವುದಷ್ಟೇ ಅಲ್ಲ. ಹಳೆಯ ವಿಚಾರಗಳನ್ನು ಧಿಕ್ಕರಿಸುವತ್ತ ಎಐಎಂಎಸ್‌ಎಸ್ ಸಜ್ಜುಗೊಳಿಸಬೇಕಿದೆ. ಹೆಣ್ಣುಮಕ್ಕಳ ಉಡುಪು ಸರಿ ಇಲ್ಲ ಎಂಬ ನೆಪವೇ ಅತ್ಯಾಚಾರಕ್ಕೆ ನೀಡುವ ಪರವಾನಗಿಯಲ್ಲ. ಅವರಲ್ಲಿ ಸಭ್ಯತೆಯ ಪಾಠ ಕಲಿಸಲಿ, ಆದರೆ ಧರಿಸುವ ಉಡುಪಿನ ಬಗ್ಗೆ ತಲೆ ತುಂಬಿಸುವುದು ಬೇಡ ಎಂದು ಹೇಳಿದರು.

ಎಐಎಂಎಸ್‌ಎಸ್‌ರಸ್ತೆಗಿಳಿದುಪ್ರತಿಭಟಿಸುವುದಲ್ಲದೇ ಮಹಿಳೆಯರನ್ನು ಹೊಸ ವಿಚಾರವಂತರನ್ನಾಗಿಸಬೇಕು. ಪದಾಧಿಕಾರಿಗಳು ಸ್ವತಃ ಹೊಸ ವಿಚಾರಗಳನ್ನು ಗ್ರಹಿಸಿ, ಕಾಲೇಜು, ಕಚೇರಿ, ಕಾರ್ಖಾನೆ ಇತ್ಯಾದಿಗಳಲ್ಲಿ ಬಿತ್ತರಿಸಬೇಕು ಎಂದರು. ಸಮಾಜದ ಯೋಚನೆ ಬದಲಾಯಿಸಿ ಹೆಣ್ಣುಮಕ್ಕಳು ಆತ್ಮಗೌರವದೊಂದಿಗೆ ಸಮಸಮಾಜ ಕಟ್ಟುವ ವಿಶ್ವಾಸ ಮೂಡಿಸಬೇಕು. ಹೆಣ್ಣು ಮೌನಿಯಲ್ಲ. ಸರ್ಕಾರದ ಮಹಿಳಾ ವಿರೋಧಿಯಲ್ಲದೆ ಜನವಿರೋಧಿ ನಡೆಗಳನ್ನೂ ಪ್ರಶ್ನಿಸಬೇಕಿದೆ ಎಂದು ಹೇಳಿದರು.

ಮೈಕ್ರೋಫೈನಾನ್ಸ್ ಕಿರುಕುಳಕ್ಕೆ ಮಹಿಳೆಯರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಸಾಲ ಕಟ್ಟದ್ದಕ್ಕೆ ಹೆಣ್ಣು ಮಗಳನ್ನು ವೇಶ್ಯಾವಾಟಿಕೆಗೆ ನೀಡಿ ಮೈಕ್ರೋಫೈನಾನ್ಸ್‌ನವರು ದುರುಳತನ ಪ್ರದರ್ಶಿಸಿದ ಉದಾಹರಣೆಗಳಿವೆ. ಕೋಟ್ಯಂತರ ತೆರಿಗೆ ಕಟ್ಟದವರು ಆರಾಮಾಗಿದ್ದಾರೆ. ಒಂದೆರಡು ಲಕ್ಷ ಕಟ್ಟದ ಜನಸಾಮಾನ್ಯರು ಸಂಕಷ್ಟ ಎದುರಿಸುವಂತಾಗಿದೆ. ಮೈಕ್ರೋಫೈನಾನ್ಸ್ ವಿರುದ್ಧ ಸರ್ಕಾರ ಇನ್ನಷ್ಟು ಕಠಿಣ ಕ್ರಮ ಕೈಗೊಳ್ಳಬೇಕಿದೆ ಎಂದು ಆಶಿಸಿದರು. 50 ಸಾವಿರ ಕೋಟಿ ರೂ.ಗಳಷ್ಟು ವ್ಯವಹಾರ ನಡೆಸುವ ನಾರಾಯಣಮೂರ್ತಿ, ಸುಬ್ರಮಣ್ಯ ಮೊದಲಾದ ಉದ್ಯಮಿಗಳು ಅತಿ ಹೆಚ್ಚಿನ ದುಡಿಮೆ ಮಾಡುವಂತೆ ಹೇಳಿಕೆ ನೀಡುವುದು ಸಹಜ. ಆದರೆ ತಲಾ 8 ತಾಸು ನಿದ್ದೆ, ಕೆಲಸ ಹಾಗೂ ಕುಟುಂಬದ ಜತೆ ಕಾಲ ಕಳೆಯದಿದ್ದರೆ ದುಡಿಮೆಯಾದರೂ ಏತಕ್ಕೆ? ಒತ್ತಡದ ಬದುಕು ಸಲ್ಲದು ಎಂದು ಹೇಳಿದರು.

ಸಂಘಟನೆ ಜಿಲ್ಲಾಧ್ಯಕ್ಷೆ ರಶ್ಮಿ ತಡಗ ಪ್ರಾಸ್ತಾವಿಕ ಮಾತನಾಡಿದರು. ಕಾರ್ಯಕ್ರಮದಲ್ಲಿ ರಾಜ್ಯಾಧ್ಯಕ್ಷೆ ಎನ್. ಎಂ.ಮಂಜುಳಾ, ಜಿಲ್ಲಾ ಕಾರ್ಯದರ್ಶಿ ಕೆ. ಭಾರತಿ, ಎಸ್‌ಯುಸಿಐ(ಸಿ) ಜಿಲ್ಲಾ ಕಾರ್ಯದರ್ಶಿ ಮಂಜುನಾಥ ಕೈದಾಳೆ ಇದ್ದರು.

### ಸಮ್ಮೇಳನದ ಬೇಡಿಕೆಗಳು..!

*** ಹೈಟೆಕ್ ವೇಶ್ಯಾವಾಟಿಕೆ ಪತ್ತೆ ಹಚ್ಚಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು.**

*** ನವಜಾತ ಶಿಶು ಹಾಗೂ ಬಾಣಂತಿಯರ ಸಾವಿನ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು.**

*** ಮರ್ಯಾದ ಹತ್ಯೆ, ಭ್ರೂಣ ಹತ್ಯೆ, ಬಾಲ್ಯ ವಿವಾಹ ಹಾಗೂ ದೇವದಾಸಿ ಪದ್ಧತಿ ಮುಂತಾದ ಅನಿಷ್ಟ ಪದ್ಧತಿಗಳಿಗೆ ಕಡಿವಾಣ ಹಾಕುವುದು.**

*** ಶಾಲಾ-ಕಾಲೇಜು, ದುಡಿಮೆ ಸ್ಥಳಗಳಲ್ಲಿ ಮಹಿಳೆಯರಿಗಾಗಿ ಶೌಚಾಲಯ ಹಾಗೂ ವಿಶ್ರಾಂತಿ ಕೊಠಡಿ ನಿರ್ಮಿಸಬೇಕು.**

*** ಸರ್ಕಾರವು ಎಲ್ಲಾ ಬಡ ಹೆಣ್ಣು ಮಕ್ಕಳಿಗೆ ಉಚಿತ ಹಾಗೂ ಗುಣಮಟ್ಟದ ಸ್ಯಾನಿಟರಿ ಪ್ಯಾಡ್ ವಿತರಿಸಬೇಕು.**

*** ಇತರೆ ಬೇಡಿಕೆಗಳನ್ನು ಮಂಡಿಸಿದರು.**

# ಅನುಪಮಾ ವಿರೂಪಾಕ್ಷಪ್ಪ ಅವರ ಕವನ ಸಂಕಲನ ಬಿಡುಗಡೆ

**(3ನೇ ಪುಟದಿಂದ)** ಜಾನಪದ ತಜ್ಞ ಡಾ.ಬಸವರಾಜ ನೆಲ್ಲಿಸರ ಕವನ ಸಂಕಲನ ಕುರಿತು ಮಾತನಾಡಲಿದ್ದಾರೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ, ವರದಿಗಾರರ ಕೂಟದ ಜಿಲ್ಲಾಧ್ಯಕ್ಷ ನಾಗರಾಜ್ ಎಸ್. ಬಡದಾಳ್ ಆಗಮಿಸಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಶ್ರೀಮತಿ ಅನುಪಮ, ಪತ್ರಕರ್ತ ಜಿಗಳಿ ಪ್ರಕಾಶ್ ಉಪಸ್ಥಿತರಿದ್ದರು.


## ಶಿವರಾತ್ರಿ ಪ್ರಯುಕ್ತ
## ಶಿವ ಶಕ್ತಿ ಸಾಧನಾ ಯೋಗ ಶಿಬಿರ




**ಉಚಿತ**



**ಸಮಯ : ಸಂಜೆ 6.30 ರಿಂದ 8.00 ಗಂಟೆಯವರೆಗೆ**
**ದಿನಾಂಕ : 17.02.2025 ಸೋಮವಾರದಿಂದ 25.02.2025ರ ವರೆಗೆ**

15 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳು, ಪುರುಷ, ಮಹಿಳೆಯರು, ವಯೋವೃದ್ದರು ಭಾಗವಹಿಸಬಹುದು.

❊ ಪ್ರಾಣಾಯಾಮ ❊ ಚಕ್ರಧ್ಯಾನ ❊ ಮುದ್ರೆ ❊ ತ್ರಾಟಕಧ್ಯಾನ ❊ ಶಿವಶಕ್ತಿ ಕುಂಡಲಿನಿ ಧ್ಯಾನ ❊ ಕಾಸ್ಮಿಕ್ ಹೀಲಿಂಗ್ ವಿಧಾನಗಳನ್ನು ಹೇಳಿಕೊಡಲಾಗುವುದು.

ಸ್ಥಳ : **ದಿವ್ಯ ಯೋಗ ಮಂದಿರ**
# 3632, 8ನೇ ಮೇನ್, 7ನೇ ಕ್ರಾಸ್, ಮೆಡಿಕಲ್ ಬಾಯ್ಸ್ ಹಾಸ್ಟೇಲ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ. ಫೋ. : 99726 00713


## ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯದಲ್ಲಿ, ದಾವಣಗೆರೆ.

**ಪಿ. & ಎಸ್.ಸಿ. ನಂ. : 7/2025**

ಅರ್ಜಿದಾರರು : ಶ್ರೀ ತಿಮ್ಮಪ್ಪ ಬಿನ್ ಲೇಟ್ ಚಿಕ್ಕಪ್ಪ, ವಯಸ್ಸು 66 ವರ್ಷ, ವ್ಯವಸಾಯ ವಾಸ : #222, ಚನ್ನೇಶಪುರ ಗ್ರಾಮ, ಕಸಬಾ ಹೋಬಳಿ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ. ವಿರುದ್ಧ /- ಎದುರುದಾರರು :ಇಲ್ಲ

**ಪತ್ರಿಕಾ ಪ್ರಕಟಣೆ**

ಮೇಲ್ಕಂಡ ಪ್ರಕರಣದ ಅರ್ಜಿದಾರರು ಘನ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ ದಾವಣಗೆರೆಯಲ್ಲಿ, ಮೇಲ್ಕಂಡ ಪ್ರಕರಣವನ್ನು ಅರ್ಜಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ, ವಿಲ್ ದಿ. : 25.05.2012ರ ರಿತ್ಯಾ ಲಕ್ಷ್ಮಮ್ಮ ಕೋಂ ನಾಗಪ್ಪ ಬಿನ್ ಹನುಮಂತಪ್ಪ ಯಾನೆ ಹನುಮಪ್ಪ ಇವರು ಬರೆದುಕೊಟ್ಟಂತೆ, ಸದರಿ ವಿಲ್ ಮೇಲೆ ಪ್ರೊಬೆಟ್ ಆದೇಶ ಕೋರಿ ಈ ಮೇಲ್ಕಂಡ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಸದರಿ ಅರ್ಜಿಯನ್ನು ಮಾನ್ಯ ನ್ಯಾಯಾಲಯವು ನೋಂದಾಯಿಸಿಕೊಂಡು ಪ್ರಕರಣವನ್ನು ದಿ.: 25.3.2025 ರಂದು ಬೆಳಿಗ್ಗೆ 11.00 ಗಂಟೆಗೆ ವಿಚಾರಣೆ ನಿಗದಿಪಡಿಸಿದ್ದು, ಅರ್ಜಿದಾರರ ಅರ್ಜಿಗೆ ಯಾರಿಗಾದರೂ ತಕರಾರು ಇದ್ದಲ್ಲಿ, ತಾವಾಗಲೀ, ತಮ್ಮ ವಕೀಲರ ಮುಖಾಂತರವಾಗಲೀ, ನಿಗದಿತ ದಿನಾಂಕದಂದು ಹಾಜರಾಗಿ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ತಮ್ಮ ಅಹವಾಲನ್ನು ಸಲ್ಲಿಸಬಹುದು. ತಪ್ಪಿದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ಷೆಡ್ಯೂಲ್ : ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು, ಕಸಬಾ ಹೋಬಳಿ, ಚನ್ನೇಶಪುರ ಗ್ರಾಮದ ರಿ.ಸ.ನಂ. : 109ರ ವಿಸ್ತೀರ್ಣ 1-ಎಕರೆ, ಇರುವ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ : ಗುಡ್ಡ, ಪಶ್ಚಿಮಕ್ಕೆ : ಗುಡ್ಡ, ಉತ್ತರಕ್ಕೆ : ಗಂಗಮ್ಮನವರ ಜಮೀನು, ದಕ್ಷಿಣಕ್ಕೆ : ದ್ಯಾಮಹಳ್ಳಿ ವಿರೂಪಾಕ್ಷಪ್ಪನವರ ಜಮೀನು.

ನ್ಯಾಯಾಲಯದ ಅಪ್ಪಣೆ ಮೇರೆಗೆ ದಿನಾಂಕ : 14.2.2025ರಂದು ನೀಡಲಾಗಿದೆ.

**ಸಹಿ/-ಅರ್ಜಿದಾರರ ಪರ ವಕೀಲರು (ಜಿ. ರುದ್ರಗೌಡ)**
**ಸ್ಥಳ : ದಾವಣಗೆರೆ, ದಿನಾಂಕ : 14.02.2025**

**ಸಹಿ/-ಮುಖ್ಯ ಆಡಳಿತಾಧಿಕಾರಿಗಳು**
**ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ, ದಾವಣಗೆರೆ.**

## ತುಂಗಾ ಪತ್ತಿನ ಸಹಕಾರ ಸಂಘ ನಿಯಮಿತ ಹೊನ್ನಾಳಿ. ಹೊನ್ನಾಳಿ ತಾ॥

### ಪ್ರಕಟಣೆ

ತುಂಗಾ ಪತ್ತಿನ ಸಹಕಾರ ಸಂಘ ನಿ., ಹೊನ್ನಾಳಿ, ಹೊನ್ನಾಳಿ ತಾಲ್ಲೂಕು ಇದರ ಮುಂದಿನ 05 ವರ್ಷಗಳ ಅವಧಿಗೆ ಆಡಳಿತ ಮಂಡಳಿಯ ಸಾಮಾನ್ಯ ಚುನಾವಣೆಯನ್ನು ದಿನಾಂಕ:02.03.2025 ರಂದು ಭಾನುವಾರ ಶ್ರೀ ಹಳದಮ್ಮದೇವಿ ಬಾಲಕಿಯರ ಪ್ರೌಢ ಶಾಲೆ, ಹೊನ್ನಾಳಿ (ನ್ಯಾಮತಿ ರಸ್ತೆ) ಇದರ ಕಟ್ಟಡದಲ್ಲಿ ನಡೆಸಲಾಗುವುದು. ಈ ಸಂಬಂಧ ಚುನಾವಣೆ ವೇಳಾಪಟ್ಟಿಯನ್ನು ನಿಯಮಾನುಸಾರ ಹೊರಡಿಸಲಾಗಿದ್ದು, ಅದನ್ನು ಸಂಘದ ಪ್ರತಿಯೊಬ್ಬ ಅರ್ಹ ಸದಸ್ಯರಿಗೆ ಅಂಚೆ ಮೂಲಕ ಕಳುಹಿಸಿ, ಸಂಘದ ಕಛೇರಿಯ ನಾಮಫಲಕದಲ್ಲಿ ಪ್ರಕಟಿಸಲಾಗಿರುತ್ತದೆ. ಆದಾಗ್ಯೂ ಅಂಚೆ ತಲುಪದ ಹಾಗೂ ಎಲ್ಲಾ ಅರ್ಹ ಸದಸ್ಯರ ತಿಳುವಳಿಕೆಗಾಗಿ ಈ ಪ್ರಕಟಣೆಯನ್ನು ನೀಡಲಾಗಿರುತ್ತದೆ.

1) ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ: 22.02.2025, 2) ನಾಮಪತ್ರ ಪರಿಶೀಲನೆ : 23.02.2025,
3) ಉಮೇದುವಾರಿಕೆ ವಾಪಸ್ ಪಡೆಯಲು ಕೊನೆಯ ದಿನಾಂಕ: 24.02.2025.
4) ಅವಶ್ಯವಿದ್ದಲ್ಲಿ, ಚುನಾವಣೆ ದಿನಾಂಕ: 02.03, 2025,

**ದಿನಾಂಕ : 15.02.2025.**
**ಸ್ಥಳ: ಹೊನ್ನಾಳಿ**

**ಸಹಿ/- ರಿಟರ್ನಿಂಗ್ ಅಧಿಕಾರಿ,**
**ತುಂಗಾ ಪತ್ತಿನ ಸಹಕಾರ ಸಂಘ ನಿ., ಹೊನ್ನಾಳಿ ಹೊನ್ನಾಳಿ ತಾಲ್ಲೂಕು ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ, ಹೊನ್ನಾಳಿ ತಾ॥, ದಾವಣಗೆರೆ ಜಿಲ್ಲೆ**

## ಭಾವಪೂರ್ಣ ಶ್ರದ್ಧಾಂಜಲಿ



**ಹೆಚ್.ಡಿ ರಾಜಶೇಖರಪ್ಪ**

ದಾವಣಗೆರೆ ತಾಲ್ಲೂಕು ಹಾಲುವರ್ತಿ ಗ್ರಾಮದ ವಾಸಿ ದೊಡ್ಡ ದ್ಯಾಮಪ್ಪ ದ್ಯಾಮಪ್ಪನವರ ಮಗ ಹೆಚ್.ಡಿ.ಮಹೇಶ್ವರಪ್ಪನವರ ಸಹೋದರ ಹೆಚ್.ಡಿ ರಾಜಶೇಖರಪ್ಪ 84 ವರ್ಷ ದಿನಾಂಕ : 15/02/2025 ನೇ ಶನಿವಾರ ಸಂಜೆ 6:00 ಗಂಟೆ 55 ನಿಮಿಷದಲ್ಲಿ ನಿಧನರಾಗಿದ್ದು ದಿನಾಂಕ: 16/02/2025 ನೇ ಭಾನುವಾರ ಮಧ್ಯಾಹ್ನ 1.00 ಗಂಟೆಗೆ ಅಂತ್ಯಕ್ರಿಯೆಯನ್ನು ಹಾಲುವರ್ತಿ ಗ್ರಾಮದಲ್ಲಿ ಅವರ ತೋಟದಲ್ಲಿ ನೆರವೇರಿಸಲಾಗುವುದು

ಇಂತಿ ದುಃಖ ತಪ್ತರು :
ಪತ್ನಿ ಗೌರಮ್ಮ, ಮಕ್ಕಳು ಅಶೋಕ್ ಶಶಿಕಲಾ ಬಸವರಾಜ್, ಮತ್ತು ಸಹೋದರರು ಸಹೋದರಿ ಅಳಿಯಂದಿರು ಮೊಮ್ಮಕ್ಕಳು ಹಾಗೂ ಬಂಧುಮಿತ್ರರು

## ನಾಗನೂರು ಗ್ರಾಮದ ಎನ್.ಡಿ. ಮಂಜಪ್ಪ ನಿಧನ



ದಾವಣಗೆರೆ ತಾಲ್ಲೂಕು ನಾಗನೂರು ವಾಸಿ ದೊಡ್ಡ ಕಲ್ಲಪ್ಪರ ದಿ. ಎನ್.ಡಿ. ಮಹೇಶ್ವರಪ್ಪ ಅವರ ಪುತ್ರ ಎನ್.ಡಿ. ಮಂಜಪ್ಪ (68) ಅವರು ದಿನಾಂಕ : 15.2.2025ರ ಶನಿವಾರ ಮಧ್ಯಾಹ್ನ 3.10ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 16.2.2025ರ ಭಾನುವಾರ ಮಧ್ಯಾಹ್ನ 12.30ಕ್ಕೆ ನಾಗನೂರು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

# ಬ್ಯಾಂಕ್ ಪ್ರಧಾನ ವ್ಯವಸ್ಥಾಪಕನಿಂದ 122 ಕೋಟಿ ಕಬಳಿಕೆ ; ಪ್ರಕರಣ ದಾಖಲು

ಮುಂಬೈ, ಫೆ. 15 - ನ್ಯೂ ಇಂಡಿಯಾ ಕೋ ಆಪರೇಟಿವ್ ಬ್ಯಾಂಕ್ ಪ್ರಧಾನ ವ್ಯವಸ್ಥಾಪಕ ಹಾಗೂ ಪ್ರಧಾನ ಲೆಕ್ಕಿಗ ಸೇರಿದಂತೆ ಹಲವರು 122 ಕೋಟಿ ರೂ. ಕಬಳಿಸಿದ್ದಾರೆ ಎಂದು ಮುಂಬೈ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಈ ಪ್ರಕರಣವನ್ನು ಆರ್ಥಿಕ ಅಪರಾಧ ದಳಕ್ಕೆ ಮುಂದಿನ ತನಿಖೆಗಾಗಿ ವಹಿಸಲಾಗಿದೆ. ಬ್ಯಾಂಕ್‌ನಲ್ಲಿ ಕಬಳಿಕೆ ನಡೆದಿರುವ ಹಿನ್ನೆಲೆಯಲ್ಲಿ ರಿಸರ್ವ್ ಬ್ಯಾಂಕ್ ಮಧ್ಯಪ್ರವೇಶಿಸಿ ಬ್ಯಾಂಕಿನಿಂದ ಠೇವಣಿ ವಾಪಸ್ ಪಡೆಯುವುದರ ಮೇಲೆ ನಿರ್ಬಂಧ ಹೇರಿತ್ತು.

ಶುಕ್ರವಾರ ಈ ಬ್ಯಾಂಕಿನ ಮಂಡಳಿಯನ್ನು ಒಂದು ವರ್ಷ ಕಾಲ ಅಮಾನತ್ತುಗೊಳಿಸಿ ರಿಸರ್ವ್ ಬ್ಯಾಂಕ್ ಆದೇಶ ಹೊರಡಿಸಿತ್ತು ಹಾಗೂ ಬ್ಯಾಂಕ್ ನಿರ್ವಹಣೆಗಾಗಿ ಆಡಳಿತಾಧಿಕಾರಿಯನ್ನು ನೇಮಿಸಿತ್ತು.

ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಲೆಕ್ಕಿಗ ಮತ್ತಿತರರು ಸೇರಿಕೊಂಡು ಬ್ಯಾಂಕಿನಲ್ಲಿ ಇರಿಸಲಾಗಿದ್ದ 122 ಕೋಟಿ ರೂ.ಗಳನ್ನು ಕಬಳಿಸಿದ್ದಾರೆ ಎಂದು ದೂರು ದಾಖಲಿಸಲಾಗಿದೆ. ಈ ಬ್ಯಾಂಕು ಮುಂಬೈ ಪ್ರದೇಶದಲ್ಲಿ 28 ಶಾಖೆಗಳನ್ನು ಹೊಂದಿದೆ. ಮಹಾರಾಷ್ಟ್ರದ ಪುಣೆ ಹಾಗೂ ಗುಜರಾತ್‌ನ ಸೂರತ್‌ನಲ್ಲಿ ತಲಾ ಒಂದು ಶಾಖೆ ಹೊಂದಿದೆ.

## ಮೇಡುಪಲ್ಲಿ ಭೀಮಣ್ಣ ನಿಧನ



ದಾವಣಗೆರೆ ವಿನಾಯಕ ನಗರ, ರಿಂಗ್ ರಸ್ತೆ ವಾಸಿ

**ಮೇಡುಪಲ್ಲಿ ಭೀಮಣ್ಣ**

ಅವರು ದಿನಾಂಕ : 15.2.2025ರ ಶನಿವಾರ ರಾತ್ರಿ 10 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 90 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಐವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 16.2.2025ರ ಭಾನುವಾರ ಮಧ್ಯಾಹ್ನ 1 ಗಂಟೆಗೆ ಭರಮಸಾಗರದ ಹತ್ತಿರವಿರುವ ಹೊಸಹಟ್ಟಿ ಗ್ರಾಮದ ಜಮೀನಿನಲ್ಲಿ ನೆರವೇರಿಸಲಾಗುವುದು.

ದು:ಖತಪ್ತ ಕುಟುಂಬ ವರ್ಗ

**ಪುತ್ರ ಮೇಲುಗಿರೀಶ್ : 98869 56680**
**ಡಾ. ನಂಬಿಯಣ್ಣ : 98862 02241**
**ಮೋಟೋ ಸರ್ವೀಸ್ ಝೋನ್ ಸಿಬ್ಬಂದಿವರ್ಗ**

॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ನಗರ ವಾಸಿ
**ಶ್ರೀ ಉದಯ್‌ಕುಮಾರ್ ಪಾಟೀಲ್ ತೌಡೂರು ಮತ್ತು ಸಹೋದರರು**
ಮಾಡುವ ವಿಜ್ಞಾಪನೆಗಳು.
ದಿನಾಂಕ :12.02.2025ನೇ ಬುಧವಾರ ರಾತ್ರಿ 10.00ಕ್ಕೆ ನನ್ನ ಸಹೋದರನಾದ
**ಶ್ರೀ ಅಶೋಕ್‌ಕುಮಾರ್ ಪಿ.ವಿ.**
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**
ದಿನಾಂಕ : 16.02.2025ನೇ ಭಾನುವಾರ ಬೆಳಿಗ್ಗೆ 11ಕ್ಕೆ ತ್ರಿಶೂಲ್ ಕಲಾಭವನದ ಸಭಾಂಗಣ, ತ್ರಿಶೂಲ್ ಟಾಕೀಸ್ ಹತ್ತಿರ, ಕೆ.ಬಿ. ಬಡಾವಣೆ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ವೀಣಾ, ಕು॥ ಭೂಮಿಕಾ, ಶ್ರೀ ಉದಯ್‌ಕುಮಾರ್ ಪಾಟೀಲ್ ತೌಡೂರು ಮತ್ತು ಸಹೋದರರು ಹಾಗೂ ಬಂಧು-ಮಿತ್ರರು.

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಚಿರಸ್ಮರಣೆ



**ದಿ. ಹೆಚ್.ಎಂ. ಪ್ರೇಮಕುಮಾರಿ ಹನಗೋಡಿ ಮಠ**

ನೀವು ನಮ್ಮನ್ನಗಲಿ ಇಂದಿಗೆ 24 ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ,
**ಮಗಳು : ಶ್ರೀಮತಿ ಸುಮನ್ ವಿ. ಕಟಗಿಹಳ್ಳಿಮಠ**
**ಅಳಿಯ : ಶ್ರೀ ವಾಗೀಶ್ ಕಟಗಿಹಳ್ಳಿಮಠ, ವಕೀಲರು**
**ಮೊಮ್ಮಕ್ಕಳು : ಸೋಹನ್ ವಿ. ಕಟಗಿಹಳ್ಳಿಮಠ, ವಕೀಲರು**
**ಧವನ್ ವಿ. ಕಟಗಿಹಳ್ಳಿಮಠ**

# ಮಹಿಳೆಯ ಶವ ಪತ್ತೆ

ದಾವಣಗೆರೆ, ಫೆ.15- ನಗರದ ಬೂದಾಳ್ ರೋಡ್ ಪೆಟ್ರೋಲ್ ಬಂಕ್ ಕಾಂಪೌಂಡ್‌ಗೆ ಹೊಂದಿಕೊಂಡಂತೆ ಬಿ.ಎನ್.ಲೇಔಟ್ ಎ.ಎಂ ಕರಾಟೆ ಶಾಲೆಯ ಆನೆಕೊಂಡ ಚಂದ್ರಶೇಖರ್ ಅವರಿಗೆ ಸೇರಿದ ಜಾಗದ ಪಕ್ಕದ ರಸ್ತೆಯಲ್ಲಿ ಸುಮಾರು 40 ರಿಂದ 45 ವಯಸ್ಸಿನ ಅಪರಿಚಿತ ಮಹಿಳೆಯ ಮೃತ ದೇಹ ದೊರೆತಿದೆ. ಮೃತರ ಚಹರೆ : 5.3 ಅಡಿ ಎತ್ತರ, ದೃಢವಾದ ಮೈಕಟ್ಟು, ಕಪ್ಪು ಕೂದಲು, ಕಪ್ಪು ಬಿಳಿ ಹಳದಿ ಬಣ್ಣದ ಚೂಡಿದಾರ ಕಪ್ಪು ಬಣ್ಣದ ನೈಟ್ ಪ್ಯಾಂಟ್ ಧರಿಸಿರುತ್ತಾರೆ. ಮೃತರ ಹೆಸರು, ವಿಳಾಸ, ವಾರಸುದಾರರು ಯಾರೆಂದು ತಿಳಿದು ಬಂದಿರುವುದಿಲ್ಲ. ಮಾಹಿತಿ ದೊರೆತಲ್ಲಿ ಬಡಾವಣೆ ಪೊಲೀಸ್ ಇನ್‌ಸ್ಪೆಕ್ಟರ್ 08192-234865, 9480803251, 259213 ಸಂಖ್ಯೆಗಳಿಗೆ ಕರೆ ಮಾಡಿ ಮಾಹಿತಿ ನೀಡಲು ಪೊಲೀಸ್ ಉಪನಿರೀಕ್ಷಕರು ತಿಳಿಸಿದ್ದಾರೆ.

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಭಾನುವಾರ, ಫೆಬ್ರವರಿ 16, 2025

## ಭಾರತ ಸೌರ ಶಕ್ತಿಯ ಸೂಪರ್ ಪವರ್

ನವದೆಹಲಿ,ಫೆ. 15 - ಭಾರತ ಸೌರ ಶಕ್ತಿಯ ಸೂಪರ್ ಪವರ್ ಆಗಿದೆ ಎಂದು ವಿಶ್ವಸಂಸ್ಥೆಯ ಪರಿಸರ ಸಂಘಟನೆಯ ಮುಖ್ಯಸ್ಥ ಸೈಮನ್ ಸ್ಟೀಲ್ ಹೇಳಿದ್ದಾರೆ.

ಇಲ್ಲಿ ಆಯೋಜಿಸಲಾಗಿರುವ ಇ.ಟಿ. ಗ್ಲೋಬಲ್ ಬಿಸಿನೆಸ್ ಸಮಿಟ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಅವರು, ಕೆಲ ಸರ್ಕಾರಗಳು ಕೇವಲ ಹೇಳಿಕೆ ನೀಡುತ್ತವೆ. ಆದರೆ ಭಾರತ ಕಾರ್ಯಗತಗೊಳಿಸುತ್ತಿದೆ ಎಂದಿದ್ದಾರೆ.

ಭಾರತ ಈಗಾಗಲೇ ಸೌರ ಶಕ್ತಿಯ ಸೂಪರ್ ಪವರ್ ಆಗಿದೆ. 100 ಗಿಗಾ ವ್ಯಾಟ್ ಸೌರಶಕ್ತಿ ಉತ್ಪಾದನಾ ಸಾಮರ್ಥ್ಯ ಹೊಂದಿರುವ ಕೇವಲ ನಾಲ್ಕು ದೇಶಗಳಲ್ಲಿ ಭಾರತ ಸಹ ಒಂದಾಗಿದೆ ಎಂದವರು ತಿಳಿಸಿದ್ದಾರೆ.

2018ರಲ್ಲಿ ದೇಶದ ಎಲ್ಲಾ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿತ್ತು. ಈಗ ದೇಶದ 140 ಕೋಟಿ ಜನರಿಗೆ ಲಾಭ ಒದಗಿಸುವ ಬೃಹತ್ ಅವಕಾಶ ದೊರೆತಿದೆ. ಭಾರತ ಈ ದಿಸೆಯಲ್ಲಿ ದೃಢವಾಗಿ ಮುನ್ನಡೆದಿದೆ ಎಂದು ಸ್ಟೀಲ್ ತಿಳಿಸಿದ್ದಾರೆ. ಇನ್ನೂ ನೂರಾರು ಗಿಗಾವ್ಯಾಟ್ ಸಾಮರ್ಥ್ಯದ ನವೀಕರಣ ಇಂಧನ ಅಳವಡಿಸಿಕೊಳ್ಳುವ (4ನೇ ಪುಟಕ್ಕೆ)

## ಬೆಂಗಳೂರಿನಿಂದ ವಿಮಾನ ನಿಲ್ದಾಣಕ್ಕೆ ರೈಲ್ವೆ ಸಂಪರ್ಕ

ಬೆಂಗಳೂರು, ಫೆ. 15 - ಈಗಿರುವ ರಸ್ತೆ, ಮೆಟ್ರೋ ರೈಲು ಹಾಗೂ ನಗರ ರೈಲಿನ ಜೊತೆಗೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ರೈಲ್ವೆ ಸಂಪರ್ಕ ಸಹ ಒದಗಿಸಲಾಗುವುದು ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಆದರೆ ಈ ಸೌಲಭ್ಯ ಕಲ್ಪಿಸುವುದಕ್ಕಿಂತ ಮುಂಚೆ ತಾಂತ್ರಿಕ ಸವಾಲುಗಳನ್ನು ಬಗೆಹರಿಸಬೇಕಿದೆ. ಈ ದಿಸೆಯಲ್ಲಿ ರೈಲ್ವೆ ತಂಡ ಕಾರ್ಯನಿರ್ವಹಿಸಲಿದೆ ಎಂದು ಸಚಿವರು ಹೇಳಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪ್ರಸಕ್ತ ಬೆಂಗಳೂರಿನಿಂದ ವಿಮಾನ ನಿಲ್ದಾಣಕ್ಕೆ ಮೆಟ್ರೋ ರೈಲು, ರಸ್ತೆ ಹಾಗೂ ನಗರ ರೈಲಿನ ಸಂಪರ್ಕ ಇದೆ. ನಗರ ರೈಲನ್ನು ರೈಲು ಮೂಲ ಭೂತ ಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿರ್ವಹಿಸುತ್ತಿದೆ ಎಂದವರು ಹೇಳಿದರು.

## ಸ್ತ್ರೀ ಕೀಳರಿಮೆಗೆ ಬ್ರೇಕ್ ಬೇಕಿದೆ



### ಮಹಿಳೆಯರ ಜಿಲ್ಲಾ ಸಮ್ಮೇಳನದಲ್ಲಿ ಎಸ್.ಶೋಭಾ ಆಶಯ

ದಾವಣಗೆರೆ, ಫೆ.15- ಮಹಿಳೆಯು ನಾಲ್ಕು ಗೋಡೆಗಳ ಮಧ್ಯೆ ಜೀವನ ನಡೆಸಬೇಕೆಂದು ಬಿತ್ತರಿಸುವವರ ಸಂಖ್ಯೆ ಹೆಚ್ಚಿದೆ. ಹಾಗಾಗಿ ಸ್ತ್ರೀಯರ ಕೀಳರಿಮೆಗೆ ಬ್ರೇಕ್ ಹಾಕಬೇಕಿದೆ ಎಂದು ಎಐಎಂಎಸ್‌ಎಸ್ ರಾಜ್ಯ ಕಾರ್ಯದರ್ಶಿ ಎಸ್. ಶೋಭಾ ಆಶಿಸಿದರು.

ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ಜಿಲ್ಲಾ ಸಮಿತಿಯಿಂದ ನಗರದ ರೋಟರಿ ಬಾಲ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮಹಿಳೆಯರ ಎರಡನೇ ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

ಹೆಣ್ಣುಮಕ್ಕಳಿಗೂ ಯೋಚನೆ ಮಾಡುವ ಶಕ್ತಿ ಇದೆ. ಹಳೆಯ ವಿಚಾರಗಳ ವಿರುದ್ಧ ಸೆಡ್ಡು ಹೊಡೆಯುವುದರ ಜತೆಗೆ, ಅವರಲ್ಲಿನ ಅಸಹಾಯಕತೆ ದೂರ ಮಾಡಿ ಗಟ್ಟಿಗೊಳಿಸಬೇಕಿದೆ ಎಂದು ಹೇಳಿದರು.

ಮಹಿಳೆಗೆ ಮಹಿಳೆಯೇ ಶತ್ರುವಲ್ಲ. ಕಟ್ಟುಪಾಡಿನ ಹಳೆಯ ವಿಚಾರಗಳೇ ಆಕೆಯ ಶತ್ರು. ಇದರ ನಡುವೆಯೂ ಅನೇಕ ಮಹಿಳೆಯರು ಸಾಧನೆ ಮಾಡಿದ್ದಾರೆ ಎಂದು ತಿಳಿಸಿದರು.

ಸಮೀಕ್ಷೆಯೊಂದರ ಪ್ರಕಾರ ಪ್ರತಿ ಐವರು ಹೆಣ್ಣು ಮಕ್ಕಳಲ್ಲಿ ಮೂವರು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಕೊಲೆ, ಅತ್ಯಾಚಾರ ಹೆಚ್ಚಿದ್ದು, (2ನೇ ಪುಟಕ್ಕೆ)

## ಕರ್ನಾಟಕ ರೈಲ್ವೆಗೆ 7,564 ಕೋಟಿ ಅನುದಾನ ನೀಡಿದ್ದೇವೆ : ವೈಷ್ಣವ್

ಬೆಂಗಳೂರು,ಫೆ.15- ಕರ್ನಾಟಕ ರೈಲ್ವೇಗೆ ಕೇಂದ್ರ ಬಜೆಟ್‌ನಲ್ಲಿ 7,564 ಕೋಟಿ ರೂ. ಅನುದಾನ ನೀಡಲಾಗಿದ್ದು, ರಾಜ್ಯದಲ್ಲಿ 1,652 ಕಿ.ಮೀ. ಹೊಸ ರೈಲ್ವೇ ಮಾರ್ಗ ನಿರ್ಮಾಣವಾಗಿದೆ ಎಂದು ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ರಾಜಧಾನಿ ಬೆಂಗಳೂರು ನಗರದ ಮೇಲಿನ ಒತ್ತಡ ಕಡಿಮೆ ಮಾಡಲು ಸಬ್ ಅರ್ಬನ್ ರೈಲ್ವೇ ಯೋಜನೆಗೆ 15,762 ಕೋಟಿ ರೂ. ಕೊಡಲಾಗಿದೆ, 15,611 ಕೋಟಿ ರೂ. ಮೆಟ್ರೋ ಯೋಜನೆಗೆ ನೀಡಲಾಗಿದೆ.

ಅಮೃತ್ ಸ್ಟೇಷನ್ ಯೋಜನೆಯಡಿ ರಾಜ್ಯದ 61 ರೈಲ್ವೇ ನಿಲ್ದಾಣಗಳ ಆಧುನೀಕರಣ ಮಾಡಲಾಗುತ್ತಿದೆ, ಈಗಾಗಲೇ ಕರ್ನಾಟಕದಲ್ಲಿ 10 ವಂದೇ ಭಾರತ್ ರೈಲುಗಳು ಸಂಚರಿಸುತ್ತಿದ್ದು, ಮತ್ತಷ್ಟು ರೈಲುಗಳು ಬರಲಿವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎನ್‌ಡಿಎ ಸರ್ಕಾರ ರೈಲ್ವೇ ವಲಯದಲ್ಲಿ 51,479 ಕೋಟಿ ರೂ.ನಷ್ಟು ಬಂಡವಾಳ ಹೂಡಿದೆ, ಯುಪಿಎ ಆಡಳಿತಾವಧಿಯಲ್ಲಿ ಕೇವಲ 850 ಕೋಟಿ ರೂ. ನೀಡಲಾಗಿತ್ತು ಎಂದರು.

ಬೆಂಗಳೂರು ಸಮೀಪ ಮೊಬೈಲ್ ಉತ್ಪಾದನಾ ಕಂಪನಿ ಆರಂಭವಾಗಲಿದೆ, (4ನೇ ಪುಟಕ್ಕೆ)

# ಸಿದ್ದರಾಮಯ್ಯ ನಾಯಕತ್ವದಿಂದ ಮಾತ್ರ ಮತ್ತೆ ಪಕ್ಷಕ್ಕೆ ಅಧಿಕಾರ

### ತಮ್ಮ ನಾಯಕನ ಸಾಮರ್ಥ್ಯ ಬಣ್ಣಿಸಿದ ಸತೀಶ್ ಜಾರಕಿಹೊಳಿ, ಹೆಚ್.ಸಿ. ಮಹದೇವಪ್ಪ

ಬೆಂಗಳೂರು,ಫೆ.15- ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬರಬೇಕೆಂದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಯಕತ್ವದಿಂದ ಮಾತ್ರ ಸಾಧ್ಯ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಇಂದಿಲ್ಲಿ ಹೊಸ ಬಾಂಬ್ ಸಿಡಿಸಿದ್ದಾರೆ.

ಜನರ ಮತ್ತು ಶಾಸಕರ ಬೆಂಬಲ ಇರುವಾಗ ಅವರು ರಾಜಕೀಯ ನಿವೃತ್ತಿ ತೆಗೆದುಕೊಳ್ಳುವುದು ಸರಿಯಲ್ಲ, ಅಂತಹ ಆಲೋಚನೆಯನ್ನೂ ಮಾಡಬಾರದು ಎಂದಿದ್ದಾರೆ.

ಇದೇ ಸಂದರ್ಭದಲ್ಲಿ ಮಾತನಾಡಿದ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಸಿದ್ದರಾಮಯ್ಯ ಮಾಸ್ ಲೀಡರ್. ಅವರ ನಾಯಕತ್ವ ಬೇಡ ಎನ್ನುವವರು ಯಾರು ಎಂದು ಪ್ರಶ್ನಿಸಿದರು. ಉಭಯ ಸಚಿವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾವೇರಿ ನಿವಾಸದಲ್ಲಿ ಭೇಟಿ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ತಮ್ಮ ನಾಯಕನ ಸಾಮರ್ಥ್ಯವನ್ನು ತಮ್ಮದೇ ದಾಟಿಯಲ್ಲಿ ಬಣ್ಣಿಸಿದರು.

ಹೊಸ ನಾಯಕತ್ವ ಬರುವವರೆಗೂ ಸಿದ್ದರಾಮಯ್ಯ ನಾಯಕತ್ವ ಇರಬೇಕು ಎಂದು ಸಚಿವದ್ವಯರು ಹೇಳುವ ಮೂಲಕ ಮುಖ್ಯಮಂತ್ರಿ ಗಾದಿ ಮೇಲೆ ಕಣ್ಣಿಟ್ಟಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಲ್ಲಿ ನಾಯಕತ್ವದ ಗುಣ ಇಲ್ಲ ಎಂದು ಪರೋಕ್ಷವಾಗಿ ಅಣಕವಾಡಿದರು.

ನಿವೃತ್ತಿ ಘೋಷಿಸಿದರೆ, ಜನರು ಮತ್ತು ಅವರ ಬೆಂಬಲಿಗರು ಅದಕ್ಕೆ ಅವಕಾಶ ಕೊಡುವುದಿಲ್ಲ, ನಮ್ಮ ಪಕ್ಷ ಮತ್ತೆ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರಬೇಕೆಂದರೆ ಸಿದ್ದರಾಮಯ್ಯ ನಾಯಕತ್ವದಿಂದ ಮಾತ್ರ ಸಾಧ್ಯ ಎಂದರು.

ಪಕ್ಷದ ನಾಯಕ ಬಸವರಾಜ ರಾಯರೆಡ್ಡಿ ಸೇರಿದಂತೆ ಅನೇಕ ಹಿರಿಯರು ಸಿದ್ದರಾಮಯ್ಯ ನಾಯಕತ್ವವೇ ಬೇಕೆಂದಿದ್ದಾರೆ, ಅದಕ್ಕೆ ನನ್ನ ಬೆಂಬಲವೂ ಇದೆ. ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಬದಲಾವಣೆಗೆ (4ನೇ ಪುಟಕ್ಕೆ)

## ಸಿದ್ದರಾಮಯ್ಯಗೆ ಠಕ್ಕರ್ ಕೊಡಲು ಜೆಡಿಎಸ್ ಸಮಾವೇಶಕ್ಕೆ ಸಿದ್ಧತೆ



ಬೆಂಗಳೂರು,ಫೆ.15- ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಠಕ್ಕರ್ ಕೊಡಲು ಹಾಸನ ಇಲ್ಲವೇ ತುಮಕೂರಿನಲ್ಲಿ ಕಾರ್ಯಕರ್ತರ ಬೃಹತ್ ಸಮಾವೇಶವನ್ನು ಮೇ ತಿಂಗಳಿನಲ್ಲಿ ನಡೆಸುವುದಾಗಿ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾರ್ಚ್ 6ರಂದು ಪೂರ್ವಭಾವಿ ಸಭೆ ಕರೆಯಲಾಗಿದೆ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ನಾಯಕತ್ವದಲ್ಲೇ ಈ ಸಮಾವೇಶ ಜರುಗಲಿದೆ ಎಂದರು.

ಮಂಡ್ಯ-ತುಮಕೂರು ಮಧ್ಯಭಾಗದಲ್ಲಿ, ಇಲ್ಲವೇ ಹಾಸನದಲ್ಲಿ ನಡೆಸಬೇಕೇ ಎಂಬ ಬಗ್ಗೆ ಈ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದು. ಪಕ್ಷ ಮತ್ತು ಸರ್ಕಾರಕ್ಕಿಂತ ತಮ್ಮ ವರ್ಚಸ್ಸು ಮತ್ತು ವ್ಯಕ್ತಿತ್ವ ಬಿಂಬಿಸಿಕೊಳ್ಳಲು ಸಿದ್ದರಾಮಯ್ಯ ಕೆಲವು ತಿಂಗಳ ಹಿಂದೆ ಹಾಸನದಲ್ಲಿ ಸಮಾವೇಶ ಮಾಡಿದ್ದಾರೆ, ಅಲ್ಲಿ ನಮಗೆ ಹಲವು ಪ್ರಶ್ನೆಗಳನ್ನು ಮುಂದಿಟ್ಟಿದ್ದಾರೆ. ಅವರ ಎಲ್ಲ (4ನೇ ಪುಟಕ್ಕೆ)

## ನಗರದಲ್ಲಿ ಇಂದು ಅನುಪಮಾ ವಿರೂಪಾಕ್ಷಪ್ಪ ಅವರ ಕವನ ಸಂಕಲನ ಬಿಡುಗಡೆ



ದಾವಣಗೆರೆ, ಫೆ.15- ಎ.ವಿ. ಪ್ರಕಾಶನ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಹಯೋಗದೊಂದಿಗೆ ಶ್ರೀಮತಿ ಅನುಪಮ ವಿರುಪಾಕ್ಷಪ್ಪ ಅವರ ದ್ವಿತೀಯ ಕವನ ಸಂಕಲನ 'ಭಾವಗಳ ಬಿಂಬ' ಲೋಕಾರ್ಪಣೆ ಸಮಾರಂಭವು ನಾಳೆ ದಿನಾಂಕ 16ರ ಭಾನುವಾರ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಡಾ. ಇ. ವಿರುಪಾಕ್ಷಪ್ಪ ಅವರು, ನಾಳೆ ದಿನಾಂಕ 16ರ ಭಾನುವಾರ ಬೆಳಿಗ್ಗೆ 10.30ಕ್ಕೆ ನಡೆಯುವ ಈ ಸಮಾರಂಭವನ್ನು ಉದ್ಘಾಟಿಸಲಿರುವ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಕವನ ಸಂಕಲನ ಲೋಕಾರ್ಪಣೆಗೊಳಿಸಲಿದ್ದಾರೆ ಎಂದರು. (2ನೇ ಪುಟಕ್ಕೆ)



**ಸೈಟುಗಳು ಮಾರಾಟಕ್ಕಿವೆ**
1) ತರಳಬಾಳು ಬಡಾವಣೆಯಲ್ಲಿ 40x60 North 2) ಕೃಷಿ ಕೇಂದ್ರ ಹಿಂಭಾಗ 30x54 North 3) 30x33 South ವಿದ್ಯಾನಗರದಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
ಭೇಟಿಯ ಸಮಯ : ಬೆ. 9 ರಿಂದ ಮಧ್ಯಾಹ್ನ 3 ಹಾಗೂ ಸಂಜೆ 7.30 ರಿಂದ 8.30
By Appointment only.
94837 23166

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ ತಿಮ್ಮಾರೆಡ್ಡಿ ಕಾಲೇಜ್ ಗೇಟ್ ಎದುರುಗಡೆ 30x56, 30x56 North ಅಕ್ಕ-ಪಕ್ಕ, 30x46, 30x46 South ಅಕ್ಕ-ಪಕ್ಕ, 30x40 North
ಐನಳ್ಳಿ ಚನ್ನಬಪಸ್ಪ ಏಜೆಂಟ್
99166 12110

**ಸೈಟ್ ಮಾರಾಟಕ್ಕಿದೆ**
ಶಾಮನೂರು ಶಿವ - ಪಾರ್ವತಿ ಬಡಾವಣೆ, 5ನೇ ಮುಖ್ಯ ರಸ್ತೆಯಲ್ಲಿ ಉತ್ತರಾಭಿಮುಖವಾಗಿರುವ 30x50 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
99862-02299

**1 BHK HOUSE FOR LEASE**
Near KSRTC Bus Stand
( Vegeterian Only)
63615 12585

**ಮನೆ ಮಾರಾಟಕ್ಕಿದೆ**
30x40 ಅಳತೆಯ ಗ್ರೌಂಡ್ ಫ್ಲೋರ್ 2 BHK, 1ನೇ ಮಹಡಿ 2 BHK, 2ನೇ ಮಹಡಿ ಸಿಂಗಲ್ ರೂಂ ಅಟ್ಯಾಚ್ ಬಾತ್ ರೂಂ ಮನೆ ಮಾರಾಟಕ್ಕಿದೆ. #1982/2, 6ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9480693506, 9449851177

**ಮಳಿಗೆಗಳು ಬಾಡಿಗೆಗಿವೆ**
* ಗ್ರೌಂಡ್ ಫ್ಲೋರ್ ಮಳಿಗೆ 450 ಚ.ಅ, 700 ಚ.ಅ.
* 1ನೇ ಮಹಡಿ ಹಾಲ್, 1200 ಚ.ಅ.,
* 2ನೇ ಮಹಡಿ ಹಾಲ್ 1200 ಚ.ಅ.
ಪಿಬಿ ರಸ್ತೆ, ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಎದುರು, ಕಿತ್ತೂರು ಕಾಂಪ್ಲೆಕ್ಸ್, ದಾವಣಗೆರೆ.
98445 85017

**ಮನೆ ಮಾರಾಟಕ್ಕಿದೆ**
ಕುಂಬಳೂರು, ಹರಿಹರ ತಾಲ್ಲೂಕು, ಶಿವಮೊಗ್ಗ - ಹರಿಹರ ರಸ್ತೆ, ನಿಟ್ಟೂರು ಕ್ರಾಸ್‌ನಲ್ಲಿ 36x88 ಅಳತೆ, ಬೋರ್‌ವೆಲ್ ಸೌಲಭ್ಯವಿರುವ ಉತ್ತರ ದಿಕ್ಕಿನ 3 BHK ಹೊಸ ಮನೆ (36x68) ಮತ್ತು ಹಳೆಮನೆ (36x20) ಮಾರಾಟಕ್ಕಿದೆ.
78925 87685, 97399 03499


# ಕರ್ನಾಟಕ ರೈಲ್ವೆಗೆ 7,564 ಕೋಟಿ ಅನುದಾನ ನೀಡಿದ್ದೇವೆ : ವೈಷ್ಣವ್

**(3ನೇ ಪುಟದಿಂದ)** ಇದರಿಂದ 40 ಸಾವಿರ ಉದ್ಯೋಗ ಸೃಷ್ಟಿಯಾಗುವ ಗುರಿ ಹೊಂದಲಾಗಿದೆ, ಮುಂದಿನ ಬಾರಿ ನಗರಕ್ಕೆ ಬಂದಾಗ ಈ ಕಂಪನಿಗೆ ಭೇಟಿ ಕೊಡುತ್ತೇನೆ.

ಉತ್ಪಾದನಾ ವಲಯಕ್ಕೆ ಬಜೆಟ್‌ನಲ್ಲಿ ಹೆಚ್ಚಿನ ಆದ್ಯತೆ ನೀಡಲಾಗಿದೆ, ಉದ್ಯೋಗ ಸೃಷ್ಟಿಯೇ ಇದರ ಗುರಿ, ಮೊಬೈಲ್ ಫೋನ್, ಎಲೆಕ್ಟ್ರಾನಿಕ್ಸ್, ಸೆಮಿಕಂಡಕ್ಟರ್, ಫುಟ್‌ವೇರ್ ವಲಯಗಳಿಗೆ ಬಜೆಟ್ ಪುಷ್ಟಿ ನೀಡಿದೆ ಎಂದರು.

ಕಳೆದ 60 ವರ್ಷಗಳಲ್ಲಿ ಆಗದಿರುವ ಕೆಲಸವನ್ನು ಪ್ರಧಾನಿ ನರೇಂದ್ರ ಮೋದಿ, ಒಂದು ಮತ್ತು ಎರಡನೇ ಅವಧಿಯಲ್ಲಿ ಮಾಡಿ ತೋರಿಸಿದ್ದಾರೆ, ದೇಶದ ಯಾವ ಭಾಗಕ್ಕೆ ಹೋದರೂ ಅಭಿವೃದ್ಧಿ ಕಾರ್ಯ ಕಾಣುತ್ತದೆ.

ಲೋಕಸಭೆಯಲ್ಲಿ ಮಂಡಿಸಲಾದ 2025-26ನೇ ಸಾಲಿನ ಕೇಂದ್ರ ಮುಂಗಡ ಪತ್ರದಲ್ಲಿ ಆದಾಯ ತೆರಿಗೆ ರಿಯಾಯಿತಿ ಮಿತಿಯನ್ನು 12 ಲಕ್ಷ ರೂ.ವರೆಗೆ ಹೆಚ್ಚಿಸಲಾಗಿದೆ, ಇದರಿಂದ ಮಧ್ಯಮ ವರ್ಗದ ಜನರಿಗೆ ಅನುಕೂಲವಾಗಿದೆ.

ಯುಪಿಎ ಆಡಳಿತಾವಧಿಯಲ್ಲಿ ಭಾರತದ ಆರ್ಥಿಕತೆ ಬಹಳ ಕೆಟ್ಟ ಸ್ವರೂಪದಲ್ಲಿತ್ತು, 2014ರಲ್ಲಿ ಬ್ಯಾಂಕಿಂಗ್ ವಲಯ ಉತ್ತಮ ವಾಗಿರಲಿಲ್ಲ, ಪ್ರಧಾನಿ ಮೋದಿ ಹೊಸ ಆಯಾಮ ನೀಡಿದರು. ವರ್ಷದಿಂದ ವರ್ಷಕ್ಕೆ ದೇಶದ ರಾಷ್ಟ್ರೀಯ ಹೆದ್ದಾರಿ, ರೈಲ್ವೇ ಹಾಗೂ ನಾಗರಿಕ ವಿಮಾನಯಾನ ವಲಯಗಳಲ್ಲಿ ಅಭಿವೃದ್ಧಿ ಆಗಿದೆ.

ಕೇಂದ್ರ ಸರ್ಕಾರದ ಆಡಳಿತಕ್ಕೆ ಜನ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ, ಮೋದಿ ದೂರದೃಷ್ಟಿ ಯೋಜನೆಗಳಿಗೆ ಜನರ ಬೆಂಬಲ ಸಿಕ್ಕಿದೆ, ಜನಧನ್, ಉಜ್ವಲಾ, ಜಲಜೀವನ್ ಯೋಜನೆಗಳು ಜನರ ಬದುಕಿನಲ್ಲಿ ದೊಡ್ಡ ಬದಲಾವಣೆ ತಂದಿವೆ, ಮೂಲಸೌಕರ್ಯ ವೃದ್ಧಿ, ಶಿಕ್ಷಣ ಅಭಿವೃದ್ಧಿ, ರೈಲ್ವೇ ಯೋಜನೆಗಳು ಜನರ ಬದುಕಿನ ಗತಿ ಬದಲಿಸಿವೆ ಎಂದರು.

